2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 17276ಃ2013

| | | | |
|---|---|---|---|
| ಸಾಕ್ಷಿದಾರನ ಹೆಸರು | ತ್ಯಾಗರಾಜ್ | ಸಿ ಡಬ್ಲ್ಯು | 7 |
| ತಂದೆಯ ಹೆಸರು | ಮಡಿವೇಲು | ಪಿ ಡಬ್ಲ್ಯು | 3 |
| ವಯಸ್ಸು | 34 ವರ್ಷ | | |
| ಉದ್ಯೋಗ | ಸಮಾಜ ಸೇವೆ | | |
| ವಾಸಸ್ಥಾನ | ಜಯನಗರ ಬೆಂಗಳೂರು | | |

ಸಾಕ್ಷಿಯನ್ನು ದಿಃ 10-07-2017 -ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ಆರೋಪಿ ಪರಿಚಯ ಇಲ್ಲ. ಚಾಸಾ 1 ಮತ್ತು 6 ರವರ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ . ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಹಿಸಸಅ ರವರು ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದರಿಂದ ಅವಕಾಶ ನೀಡಲಾಯಿತು.)

ಪಾಟಿಸವಾಲುಃ ಹಿಸಸಅ ರವರಿಂದಃ

ಜಯನಗರ 4 ನೇ ಟಿ ಬ್ಲಾಕ್ ತಿಲಕ್‌ನಗರ ಸ್ವಾಗತ್ ಮುಖ್ಯರಸ್ತೆಯಲ್ಲಿರುವ ಪುಷ್ಪ ಕ್ಲಿನಿಕ್ ಬಳಿ ಆರೋಪಿತರು 500 ರಿಂದ 2000 ಸಾವಿರ ಗಳನ್ನು ಹಣ ಪಡೆದು ನಕಲಿ ಜನನ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದರು ಎಂಬ ವಿಷಯ ನನಗೆ ಗೊತ್ತಿತ್ತು ಆ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 2 ಅಂತ ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿಸವಾಲುಃ ಆರೋಪಿ ಪರ ವಕೀಲರನ್ನು ಪಾಟಿಸವಾಲು ಇರುವುದಿಲ್ಲ ಅಂತ ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

2ನೇ ಅ ಮು ಮ ದಂ.